# ಅಪರ ಸಿವಿಲ್ ನ್ಯಾಯಾಧೀಶರು ಹಾಗೂ **ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ**, ಪಾಂಡಪುವರ

**ಸಿಸಿ ನಂಃ 681/2023**

ಕರ್ನಾಟಕ ರಾಜ್ಯದ ಪರವಾಗಿ
ಪೋಲಿಸು ಉಪ ನಿರೀಕ್ಷಕರು
ಮೇಲುಕೋಟೆ ಪೋಲೀಸು ಠಾಣೆ ಫಿರ್ಯಾಧಿದಾರರು

-ವಿರುದ್ಧ-

ಜಯರಾಮ ಮತ್ತು ಇತರರು ಆರೋಪಿಗಳು

## ದೋಷಾರೋಪಣೆ

ಶ್ರೀ ಕಿಶೋರ್ ಕುಮಾರ್ ಕೆ ಎನ್ ಬಿ.ಎ.ಎಲ್, ಎಲ್.ಎಲ್.ಬಿ. ಅಪರ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿ ನ್ಯಾಯಾಲಯ, ಪಾಂಡಪುವರ ಆದ ನಾನು,

1. ಜಯರಾಮ ಬಿನ್ ಲೇಟ್ ಬೆಟ್ಟೇಗೌಡ, ವಾಸಃ ಕುಪ್ಪಳ್ಳಿ ಗ್ರಾಮ,
2. ದೇವರಾಜು ಬಿನ್ ನಿಂಗರಾಜು, 31 ವರ್ಷ, ವಾಸಃ ಹೊಸಹಳ್ಳಿ ಗ್ರಾಮ,
3. ಅಶೋಕ ಬಿನ್ ತಿಮ್ಮೇಗೌಡ, ವಾಸಃ ಕುಪ್ಪಳ್ಳಿ ಗ್ರಾಮ,
4. ಬೆಟ್ಟಮ್ಮ ಕೋಂ ಬೆಟ್ಟೇಗೌಡ, ವಾಸಃ ಕುಪ್ಪಳ್ಳಿ ಗ್ರಾಮ,
5. ಲೀಲಾವತಿ ಕೋಂ ಜಯರಾಮು, ವಾಸಃ ಕುಪ್ಪಳ್ಳಿ ಗ್ರಾಮ,

ಎಲ್ಲರೂ ಮೇಲುಕೋಟೆ ಹೋಬಳಿ, ಪಾಂಡವಪುರ ತಾಲ್ಲೂಕು

ನಿಮ್ಮ ಮೇಲೆ ಹೊರಿಸುವ ಆರೋಪಣೆ ಏನೆಂದರೆಃ-

ಮೊದಲನೆಯದಾಗಿ ಃ ದಿನಾಂಕಃ 27.04.2023 ರಂದು ಸಂಜೆ 4.45 ಗಂಟೆ ಸಮಯದಲ್ಲಿ ಮೇಲುಕೋಟೆ ಪೋಲೀಸ್ ಠಾಣಾ ಸರಹದ್ದಿನ ಕುಪ್ಪಳ್ಳಿ ಗ್ರಾಮದ ಜಯಲಕ್ಷ್ಮಿ ರವರ ವಾಸದ ಮನೆಯ ಮುಂದೆ ಸಾರ್ವಜನಿಕ ರಸ್ತೆಯಲ್ಲಿ 1 ರಿಂದ 5 ನೇ ಆರೋಪಿಗಳಾದ ನೀವುಗಳು ಅಕ್ರಮ ಕೂಟ ಕಟ್ಟಿಕೊಂಡು ಬಂದಿರುತ್ತೀರಿ

ಎಂದು ಆ ಕಾರಣ ಕಲಂ 143 ಸಹವಾಚಕ 149 ಭಾರತೀಯ ದಂಡ ಸಂಹಿತೆಯಡಿ ಶಿಕ್ಷಾರ್ಹವಾದ ಅಪರಾಧವನ್ನು ನನ್ನ ಸಂಜ್ಞೆ ಮತ್ತು ಪರಿಮಿತಿಯೊಳಗೆ ಎಸಗಿರುತ್ತೀರಿ.

ಎರಡನೆಯದಾಗಿ - ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿಗಳಾದ ನೀವುಗಳು ಅಕ್ರಮ ಕೂಟ ಕಟ್ಟಿಕೊಂಡು, ಸಾಕ್ಷಿ-1 ರವರ ಜೊತೆ ಜಮೀನಿನ ಹಣಕಾಸಿನ ವಿಚಾರದಲ್ಲಿ ದ್ವೇಷ ಇಟ್ಟುಕೊಂಡು ಜಗಳ ಮಾಡುವ ಉದ್ದೇಶದಿಂದ ಆರೋಪಿ 1 ರವರು ತಮ್ಮ ಬಾಬ್ತು ಟ್ರಾಕ್ಟರ್ ನಂ. ಕೆ ಎ 18 ಟಿ ಎ 7932 ನ್ನು ಸಾಕ್ಷಿ 1 ರವರ ಕಾರ್ ನಂ. ಕೆ ಎ 51 ಎಂ ಕೆ 3053 ಕ್ಕೆ ಅಡ್ಡಲಾಗಿ ಕಾರಿನ ಮುಂದೆ ನಿಲ್ಲಿಸಿ ಆರೋಪಿ 2 ರವರು ಟಾಟಾ ಎಸಿಇ ನಂ. ಕೆಎ 05 ಎಎ 8828 ನ್ನು ಕಾರಿನ ಹಿಂಬದಿಗೆ ಅಡ್ಡಲಾಗಿ ನಿಲ್ಲಿಸಿ ಸಾಕ್ಷಿ 1 ರವರು ಅಡ್ಡಗಟ್ಟಿ ಮುಂದೆ ಹೋಗದಂತೆ ತಡೆಹಿಡಿದಿರುತ್ತೀರಿ ಎಂದು ಆ ಕಾರಣ ಕಲಂ 341 ಸಹವಾಚಕ 149 ಭಾರತೀಯ ದಂಡ ಸಂಹಿತೆಯಡಿ ಶಿಕ್ಷಾರ್ಹವಾದ ಅಪರಾಧವನ್ನು ನನ್ನ ಸಂಜ್ಞೆ ಮತ್ತು ಪರಿಮಿತಿಯೊಳಗೆ ಎಸಗಿರುತ್ತೀರಿ.

ಮೂರನೆಯದಾಗಿ - ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, ಆರೋಪಿಗಳಾದ ನೀವುಗಳು ಅಕ್ರಮ ಕೂಟ ಕಟ್ಟಿಕೊಂಡು, ಸಾಕ್ಷಿ-1 ರವರಿಗೆ ಬೋಳಿ ಮಗನೇ ಸೂಳೆಮಗನೇ ಇತ್ಯಾದಿ ಅವಾಚ್ಯ ಶಬ್ದಗಳಿಂದ ಬೈದಿರುತ್ತೀರಿ ಎಂದು ಆ ಕಾರಣ ಕಲಂ 504 ಸಹವಾಚಕ 149 ಭಾರತೀಯ ದಂಡ ಸಂಹಿತೆಯಡಿ ಶಿಕ್ಷಾರ್ಹವಾದ ಅಪರಾಧವನ್ನು ನನ್ನ ಸಂಜ್ಞೆ ಮತ್ತು ಪರಿಮಿತಿಯೊಳಗೆ ಎಸಗಿರುತ್ತೀರಿ.

ಕೊನೆಯದಾಗಿ - ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿಗಳಾದ ನೀವುಗಳು ಅಕ್ರಮ ಕೂಟ ಕಟ್ಟಿಕೊಂಡು, ಮೇಲ್ಕಂಡ ಉದ್ದೇಶದಂತೆ ಆರೋಪಿ 1 ಮತ್ತು 2 ರವರು ಸಾಕ್ಷಿ 1 ರವರನ್ನು ಉದ್ದೇಶಿಸಿ ನೀನು ಮತ್ತೆ ಊರಿಗೆ ಬಂದರೆ ಜೀವ ಸಹಿತ ಉಳಿಸುವುದಿಲ್ಲ ಇಲ್ಲೇ ಕೊಲೆ ಮಾಡಿ ಹೂತು ಹಾಕುವುದಾಗಿ ಕೊಲೆ ಬೆದರಿಕೆ ಹಾಕಿರುತ್ತೀರಿ ಎಂದು ಆ ಕಾರಣ ಕಲಂ 506 ಸಹವಾಚಕ 149 ಭಾರತೀಯ ದಂಡ ಸಂಹಿತೆಯಡಿ ಶಿಕ್ಷಾರ್ಹವಾದ ಅಪರಾಧವನ್ನು ನನ್ನ ಸಂಜ್ಞೆ ಮತ್ತು ಪರಿಮಿತಿಯೊಳಗೆ ಎಸಗಿರುತ್ತೀರಿ.

ಮೇಲೆ ಹೇಳಿದ ದೋಷಾರೋಪಣೆಗೆ ವಿಚಾರಣೆ ಗೊಳಪಡಬೇಕಾಗಿ ಈ ಮೂಲಕ ನಿರ್ದೇಶಿಸುತ್ತೇನೆ

ಪ್ರ.ನಂ.1ಃ ನೀವು ಈ ಮೇಲಿನ ಆಪಾದನೆಯನ್ನು ಓದಿ ಹೇಳಿದ್ದು ಅರ್ಥ ಮಾಡಿಕೊಂಡಿರುವಿರಾ?

ಉತ್ತರಃ 1ನೇ ಆರೋಪಿತ
2ನೇ ಆರೋಪಿತ
3ನೇ ಆರೋಪಿತ
4ನೇ ಆರೋಪಿತ
5ನೇ ಆರೋಪಿತ

ಪ್ರ.ನಂ.2ಃ ನೀವು ಈ ಆಪಾದನೆಯನ್ನು ಒಪ್ಪಿಕೊಳ್ಳುವಿರಾ ಅಥವಾ ವಾದಿಸುವಿರಾ?

ಉತ್ತರಃ 1ನೇ ಆರೋಪಿತ
2ನೇ ಆರೋಪಿತ
3ನೇ ಆರೋಪಿತ
4ನೇ ಆರೋಪಿತ
5ನೇ ಆರೋಪಿತ

ಆರೋಪಿಯನ್ನು ತೆರೆದ ನ್ಯಾಯಾಲಯದಲ್ಲಿ ವಿಚಾರಿಸಿದ ಬಳಿಕ ಆತನ ಹೇಳಿಕೆಯನ್ನು ಪಡೆದಿದ್ದು ಅದು ಅವರ ಸತ್ಯ ಹಾಗೂ ಸಂಪೂರ್ಣವಾದ ಹೇಳಿಕೆಯಾಗಿರುತ್ತದೆ ಎಂದು ಈ ಮೂಲಕ ದೃಢೀಕರಿಸುತ್ತೇನೆ.

ಅಪರ ಸಿವಿಲ್ ನ್ಯಾಯಾಧೀಶರು ಹಾಗೂ
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿ
ಪಾಂಡವಪುರ

ದಿನಾಂಕಃ 15.09.2023
ಸ್ಥಳಃ ಪಾಂಡವಪುರ